# ಶಿಮ್ಲಾದಲ್ಲಿ ಸಭಾಧ್ಯಕ್ಷ ಸಭಾಪತಿಗಳ ಸಮಾವೇಶ

ಹುಬ್ಬಳ್ಳಿ: ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ನ. 17 ಮತ್ತು 18ರಂದು ಎರಡು ದಿನ ದೇಶದ ವಿವಿಧ ವಿಧಾನಸಭಾಧ್ಯಕ್ಷರು ಮತ್ತು ಪರಿಷತ್ ಸಭಾಪತಿಗಳ ಅಖಿಲ ಭಾರತ ಮಟ್ಟದ ಸಮಾವೇಶ ಹಾಗೂ ಶತಮಾನೋತ್ಸವ ಸಮಾರಂಭ ನಡೆಯಲಿದ್ದು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

82ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ ಇದಾಗಿದ್ದು "ಸಂವಿಧಾನ, ಸದನ ಮತ್ತು ನಾಗರಿಕರ ಬಗೆಗೆ ಪೀಠಾಸೀನಾಧಿಕಾರಿಗಳ ಹೊಣೆಗಾರಿಕೆ" ಕುರಿತು ವಿಷಯ ಮಂಡಿಸಲಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಉದ್ಘಾಟಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸಮಾವೇಶದಲ್ಲಿ ಮಾತನಾಡಲಿದ್ದಾರೆ.

ಸಂಯುಕ್ತ ಕರ್ನಾಟಕ

# ನೀತಿಸಂಹಿತೆ ರೂಪಿಸಲು ಸಕಾಲ

**ಸಂ.ಕ,ಸಮಾಚಾರ ಬೆಂಗಳೂರು**

ಸಂಸತ್ತು ಮತ್ತು ಶಾಸನ ಸಭೆಗಳಲ್ಲಿ ಸುಗಮ ಕಲಾಪ ನಡೆಸಲು ಸದಸ್ಯರಿಗೆ ನೀತಿ ಸಂಹಿತೆ ರೂಪಿಸಲು ಇದು ಸಕಾಲ ಎಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಪಾದಿಸಿದ್ದಾರೆ.

ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ನಡೆಯುತ್ತಿರುವ 3 ದಿನಗಳ 82 ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಬುಧವಾರ ಮಾತನಾಡಿದ ಅವರು ಅಶಿಸ್ತು ಮತ್ತು ಸದಸ್ಯರ ಅಡ್ಡಿಪಡಿಸುವ ವರ್ತನೆಯಿಂದ ಹಲವು ಬಾರಿ ಸದನದ ನೈಜ ಉದ್ದೇಶವನ್ನು ಅಪಹರಣ ಮಾಡುವಂತಾಗುತ್ತದೆ. 2008 ರಲ್ಲೇ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ನೀತಿ ಸಂಹಿತೆ ರೂಪಿಸುವ ಕುರಿತು ಕೈಗೊಂಡ ನಿರ್ಣಯಗಳು ಇನ್ನೂ ಸಾಕಾರಗೊಂಡಿಲ್ಲ ಎಂದು ವಿಷಾದಿಸಿದರು. ಶಾಸನ ಸಭೆಗಳಲ್ಲಿ ಕೋಲಾಹಲ ಮತ್ತು ಅಹಿತರ ಘಟನೆಗಳನ್ನು ಕೊನೆಗಾಣಿಸುವ ಅವಶ್ಯಕತೆಯಿದೆ. ಶಿಸ್ತು, ವಿನಯ, ಘನತೆ ಮತ್ತು ಸದನದ ಗೌರವವನ್ನು ಕಾಪಾಡುವ ಜವಾಬ್ದಾರಿಯನ್ನು ಆಯಾ ಪಕ್ಷಗಳ ಮುಖಂಡರು ಮತ್ತು ಮುಖ್ಯ ಸಚೇತಕರು ಹೊರಬೇಕು ಎಂದರು. ಹಾಲಿ ಇರುವ ಸದನ ಸಮಿತಿಗಳ ಕಾರ್ಯನಿರ್ವಹಣೆಯ ವ್ಯವಸ್ಥೆ, ಆಡಳಿತ, ಸರ್ಕಾರದ ನೀತಿ, ಮತ್ತು ಹಣ ಸದ್ಬಳಕೆ ಕುರಿತು ಪರಿಣಾಮಕಾರಿ ಸುಧಾರಣೆಗಳನ್ನು ತರುವ ಕುರಿತು ಮರುಚಿಂತನೆ ನಡೆಸುವ ಅಗತ್ಯವಿದೆ ಎಂದು ಹೇಳಿದರು. ಸಮ್ಮೇಳನದಲ್ಲಿ ಕರ್ನಾಟಕ ವಿಧಾನಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರೂ ಪಾಲ್ಗೊಂಡಿದ್ದಾರೆ.

**ಸಂಸದ ಶಾಸಕರ ನಡವಳಿಕೆ**




ಸಂಯುಕ್ತ ಕರ್ನಾಟಕ Thu, 18 November 2021
epaper.samyukthakarnataka.com/c/64419287

# ಮುಖ್ಯಮಂತ್ರಿ ಬದಲಾವಣೆ ಇಲ್ಲ

**ಧಾರವಾಡ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಆಗುವುದಿಲ್ಲ. ಎಲ್ಲವೂ ಹಾಗೇ ಇರುತ್ತದೆ. ರಾಜಕಾರಣದಲ್ಲಿ ಹಾಗೇ ಹವಾ ಬಿಡುತ್ತಿರುತ್ತಾರೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಬಸವರಾಜ ಬೊಮ್ಮಾಯಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರೇ ಮುಂದುವರೆಯಲಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿಯಾಗಿದ್ದು, ಇಷ್ಟು ಬೇಗನೆ ಬದಲಾವಣೆ ಆಗುವುದು ಸಾಧ್ಯವಿಲ್ಲ ಎಂದರು.



ರಾಜ್ಯದಲ್ಲಿ ಯಾವಾಗ ಹಣಕಾಸಿನ ಸಮಸ್ಯೆ ಉಂಟಾಗುತ್ತದೆಯೋ ಆಗ ಉತ್ತರ ಕರ್ನಾಟಕದವರೇ ಮುಖ್ಯಮಂತ್ರಿಗಳಾಗುತ್ತಾರೆ. ಏನೂ ಮಾಡಲಾರದಂತಹ ಪರಿಸ್ಥಿತಿಯಲ್ಲೇ ಈ ಕಡೆಯವರು ಸಿಎಂ ಆಗುತ್ತಾರೆ. ಬೊಮ್ಮಾಯಿಯವರು ಬಹಳ ಕಷ್ಟ ಪರಿಸ್ಥಿತಿಯಲ್ಲಿ ಬಂದಿದ್ದಾರೆ. ಅವರು ಇನ್ನಷ್ಟು ದಿನ ಮುಂದುವರೆಯಲಿ ಎಂಬುದು ನಮ್ಮ ಆಶಯ ಎಂದರು.

ಬಿಟ್‌ಕಾಯಿನ್ ವಿಚಾರಣೆ ನಡೆದಿದೆ. ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮವಾಗುತ್ತದೆ. ಈ ಬಗ್ಗೆ ಸವಿಸ್ತಾರವಾದ ಚರ್ಚೆ ಆಗಬೇಕು ಎಂದ ಅವರು, ಸದನದಲ್ಲಿ ಧರಣಿ, ಚೀರಾಟ ಮೊದಲು ಬಂದ್ ಮಾಡಬೇಕಿದೆ. ಈ ಬಗ್ಗೆ ನಾನು ಪುಸ್ತಕ ಮಾಡಿದ್ದು, ಶಿಮ್ಲಾದಲ್ಲಿ ನಡೆಯುವ ಆಲ್ ಇಂಡಿಯಾ ಸ್ಪೀಕರ್‌ಗಳ ಸಭೆಯಲ್ಲಿ ಈ ಪುಸ್ತಕ ಮಂಡಿಸಲಿದ್ದೇನೆ. ಹೊಸ ಶಾಸಕರಿಗೆ ಸಮಾಜ, ಜನರ ಬಗ್ಗೆ ಕಾಳಜಿ ಇಲ್ಲ. ಕಾಳಜಿಯ ಕೆಲಸ ಮಾಡಬೇಕಿದೆ. ಅದನ್ನು ನಾನು ಅಜೆಂಡಾದಲ್ಲಿ ಸೇರಿಸಲಿದ್ದೇನೆ ಎಂದರು.

ಸಂಯುಕ್ತ ಕರ್ನಾಟಕ Sun epa